# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1028(1102) |
| ಸದಸ್ಯರ ಹೆಸರು | : | ಡಾ: ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 16.12.2025 |
| ಉತ್ತರಿಸಬೇಕಾದವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕಲಬುರಗಿ ಜಿಲ್ಲೆಯಲ್ಲಿ ಇಂಟಿಗ್ರೇಟಡ್ ಟೌನ್ ಶಿಫ್ ಅಭಿವೃದ್ಧಿ ಪಡಿಸಲು ಈ ಹಿಂದೆ ಆಯವ್ಯಯದಲ್ಲಿ ಘೋಷಿಸಿದ್ದು ಸದರಿ ಯೋಜನೆಯು ಯಾವ ಹಂತದಲ್ಲಿದೆ. | 2024-25ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ 270 ರಲ್ಲಿ ಮೈಸೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಕಲಬುರಗಿ, ಕೆ.ಜಿ.ಎಫ್, ತುಮಕೂರಿನ ವಸಂತನರಸಾಪುರ ಮತ್ತು ಬಳ್ಳಾರಿ ನಗರಗಳ ಸಮೀಪದಲ್ಲಿ ಇಂಟಿಗ್ರೇಟೆಡ್ ಟೌನಶಿಪ್ ಗಳನ್ನು ಅಭಿವೃದ್ಧಿಪಡಿಸಲಾಗುವುದಾಗಿ ಘೋಷಿಸಲಾಗಿದೆ.<br><br>ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಇಂಟಿಗ್ರೇಟೆಡ್ ಟೌನಶಿಪ್ ಯೋಜನೆಯನ್ನು ಕೈಗೊಳ್ಳುವ ಸಂಬಂಧ ಸರ್ಕಾರಿ ಜಮೀನುಗಳ ಮಾಹಿತಿ ನೀಡುವಂತೆ ತಹಶೀಲ್ದಾರ್, ಕಲಬುರಗಿ ತಾಲ್ಲೂಕು ರವರನ್ನು ಕೋರಿದ್ದು, ಸರ್ಕಾರಿ ಜಮೀನುಗಳ ಲಭ್ಯತೆಯ ಬಗ್ಗೆ ಪರಿಶೀಲಿಸಲಾಗುತ್ತಿದೆ. ಇಂಟಿಗ್ರೇಟೆಡ್ ಟೌನಶಿಪ್ ಗಾಗಿ ಅನುದಾನವನ್ನು ಮೀಸಲಿಡಲಾಗಿರುವುದಿಲ್ಲ.<br><br>ಇಂಟಿಗ್ರೇಟೆಡ್ ಟೌನಶಿಪ್ ನ್ನು ಕೈಗೊಳ್ಳಲು ಸಮಗ್ರವಾದ ನಿಯಮಗಳು/ನಿಯಮಾವಳಿಗಳಿಲ್ಲದೇ ಇರುವುದರಿಂದ ಪ್ರತ್ಯೇಕ ನಿಯಮಗಳನ್ನು "The Karnataka Integrated Township Rules 2024" ರಚಿಸಿ ವಿವಿಧ ಇಲಾಖೆಯ ಪರಿಶೋಧನೆಗೆ ಸಲ್ಲಿಸಲಾಗಿರುತ್ತದೆ.<br><br>ಕಾನೂನು ಇಲಾಖೆಯು, ಇಂಟಿಗ್ರೇಟೆಡ್ ಟೌನಶಿಪ್ ನಿಯಮಗಳನ್ನು ರಚಿಸಲು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರಲ್ಲಿ ಅವಕಾಶ ಕಲ್ಪಿಸಿ ಕಾಯ್ದೆಗೆ ತಿದ್ದುಪಡಿ ತರಬೇಕಾಗಿರುವುದಾಗಿ ಅಭಿಪ್ರಾಯಿಸಿರುತ್ತದೆ. ಅದರಂತೆ ಕಾಯ್ದೆಯಲ್ಲಿ ತಿದ್ದುಪಡಿ ತರುವ ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿರುತ್ತದೆ. ಕಾಯ್ದೆಗೆ ತಿದ್ದುಪಡಿ ತಂದ ನಂತರ ನಿಯಮಾನುಸಾರ ಪರಿಶೀಲಿಸಲಾಗುವುದು. |
| ಆ | ಈ ಇಂಟಿಗ್ರೇಟಡ್ ಟೌನ್ ಅಭಿವೃದ್ಧಿಗಾಗಿ ಜಿಲ್ಲೆಯ ಯಾವ ಸ್ಥಳವನ್ನು ಮತ್ತು ಎಷ್ಟು ವಿಸ್ತೀರ್ಣವನ್ನು ಗುರುತಿಸಲಾಗಿದೆ ಹಾಗೂ ಇಂಟಿಗ್ರೇಟಡ್ ಟೌನ್‌ಶಿಪ್‌ಗೆ ಎಷ್ಟು ಅನುದಾನವನ್ನು ಮೀಸಲಿಡಲಾಗಿದೆ. | |
| ಇ | ಮೀಸಲಿಟ್ಟ ಅನುದಾನದಲ್ಲಿ ಬಿಡುಗಡೆ ಮಾಡಿರುವ ಅನುದಾನದಲ್ಲಿ ಬಿಡುಗಡೆ ಮಾಡಿರುವ ಅನುದಾನ ಎಷ್ಟು ಹಾಗೂ ಇಂಟಿಗ್ರೇಟಡ್ ಟೌನ್‌ಶಿಪ್ ಅಭಿವೃದ್ಧಿಗಾಗಿ ಸ್ಥಳ ಗುರುತಿಸದಿದ್ದಲ್ಲಿ ಯಾವಾಗ ಗುರುತಿಸಲಾಗುವುದು. (ವಿವರ ನೀಡುವುದು). ಸದರಿ ಯೋಜನೆಯನ್ನು ಪೂರ್ಣಗೊಳಿಸಲು ಸರ್ಕಾರ ನಿಗಧಿಪಡಿಸಿರುವ ಕಾಲಮಿತಿಯೇನು? (ವಿವರ ನೀಡುವುದು) | |

**ಸಂಖ್ಯೆ: ನಅಇ 255 ಗುಅಪ್ರಾ 2025 (ಇ-ಕಡತ)**

(ಬಿ.ಎಸ್. ಸುರೇಶ)

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು